**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.**

ದಿನಾಂಕ 15 ನೇ ಜುಲೈ ಮಾಹೆ 2025 ನೇ ಇಸವಿ.

ಸಿ.ಸಿ. ನಂಃ **656/2021**

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ
ಕೋ-ಆಪರೇಟಿವ್ ಲಿಮಿಟೆಡ್, ಕಾರ್ಕಳ,
ಪ್ರತಿನಿಧಿಸುವವರುಃ ಸಹಾಯಕ ಬ್ರ್ಯಾಂಚ್ ಮ್ಯಾನೇಜರ್,
ಕಿಶೋರ್ ದೇವಾಡಿಗ, ಪ್ರಾಯ 25 ವರ್ಷಗಳು,
ತಂದೆಃ ಕೃಷ್ಣ ದೇವಾಡಿಗ,
ವಾಸಃ ಮಂಜುನಾಥ ಕೃಪ,
ಅಂಚಾರು ಮನೆ, ರೆಂಜಾಳ ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಲತಿಫ್,
ಪ್ರಾಯ 39 ವರ್ಷಗಳು,
ತಂದೆಃ ಅಬ್ದುಲ,
ವಾಸಃ ಮನೆ ನಂ. 3-190, ಮುದ್ದಣ್ಣ ನಗರ,
ಸಾಣೂರು ಗ್ರಾಮ, ಕಾರ್ಕಳ ತಾಲೂಕು,
ಉಡುಪಿ ಜಿಲ್ಲೆ. ... ಆರೋಪಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿ ಹೇಳಿಕೆಃ**

ಪ್ರಶ್ನೆ 1ಃ ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರಃ**

**ಪ್ರಶ್ನೆ 2ಃ ಪಿಡಬ್ಲ್ಯೂ-1 ಪಿರ್ಯಾದುದಾರರಾದ ಶ್ರೀ ಕಿಶೋರ್ ದೇವಾಡಿಗ ಇವರು ತಮ್ಮ ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಯ ಸಲುವಾಗಿ ದಿಃ 30-03-2021 ರಂದು ರೂ. 4,67,657/- ಗಳಿಗೆ ವಿಜಯ ಬ್ಯಾಂಕ್, ಶಿರ್ವಾ ಶಾಖೆ ಚೆಕ್ ಸಂಃ 178978 ನ್ನು ನೀಡಿದ್ದು, ಪಿರ್ಯಾದಿ ಸಂಸ್ಥೆಯವರು ಅದನ್ನು ನಗದೀಕರಿಸಲು ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್, ಕಾರ್ಕಳ ಶಾಖೆಗೆ ಹಾಜರುಪಡಿಸಿದ್ದು,

ಆದರೆ 'Funds Insufficient' ಎಂಬ ವಿಷಯವನ್ನು ಸದರಿ ಬ್ಯಾಂಕಿನವರು ದಿಃ 02-04-2021 ರ ಹಿಂಬರಹದ ಮೂಲಕ ತಿಳಿಯಪಡಿಸಿದ್ದು, ಅದರಂತೆ ಪಿರ್ಯಾದಿ ಸಂಸ್ಥೆಯವರು ದಿಃ 24-04-2021 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸು ನಿಮಗೆ ಜಾರಿಯಾಗಿದ್ದು, ಸದರಿ ನೋಟಿಸನ್ನು ನೀವು ಸ್ವೀಕರಿಸಿದ್ದು, ಇದುವರೆಗೆ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ**

ಪ್ರಶ್ನೆ **3**ಃ ಈ ಮೊಕದ್ದಮೆಯ ಬಗ್ಗೆ ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯೇ?

**ಉತ್ತರಃ**

ಪ್ರಶ್ನೆ **4-** ನಿಮ್ಮ ಪರವಾಗಿ ಪ್ರತಿರಕ್ಷೆ ಸಾಕ್ಷ್ಯ ಇದೆಯೇ?

**ಉತ್ತರಃ**

(ಮುಕ್ತ ನ್ಯಾಯಾಲಯದಲ್ಲಿ ಆಪಾದಿತನ ವಿಚಾರಣೆ ನನ್ನ ಸಮ್ಮುಖದಲ್ಲಿ ನನಗೆ ಕೇಳುವಂತೆ ನಡೆಯಿತು ಮತ್ತು ಈ ಅಭಿಲೇಖವು ಆಪಾದಿತನ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ವಿವರವನ್ನು ಒಳಗೊಂಡಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

(ಕೋಮಲ ಆರ್.ಸಿ.)
ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ.